**ಕಲ್ಪನೆ**



ಫ್ರಾನ್ಸ್‌ನ ‘ಐಫೆಲ್ ಟವರ್’ ಮುಂಭಾಗದಲ್ಲಿ, ‘ಜೆಆರ್’ ಎಂದು ಪ್ರಸಿದ್ಧರಾದ ಫ್ರೆಂಚ್ ಬೀದಿ ಕಲಾವಿದ ಮತ್ತು ಛಾಯಾಗ್ರಾಹಕ, Jean Rene ಅವರ ಬೃಹತ್ ಕಲಾಕೃತಿ ಅನಾವರಣಗೊಂಡಿದೆ. ಗೋಪುರದ ಬುಡದ ಖಾಲಿ ಜಾಗದಿಂದ ಪ್ರಪಾತದಂತಹ ಜಾಗಕ್ಕೆ ಮಹಿಳೆಯೊಬ್ಬಳು ಜಿಗಿಯುವಂತೆ ಕಾಣಿಸುವ ಈ ಕಲಾಕೃತಿ, ಮಾಂತ್ರಿಕ ವಾಸ್ತವವೊಂದನ್ನು ಸಹೃದಯರ ಗಮನಕ್ಕೆ ತರುವಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸುಪ್ತಾವಸ್ಥೆಯಲ್ಲಾದರೂ ಹಂಬಲಿಸುವ ಈ ರಮ್ಯ–ರೋಚಕ ಜಿಗಿತ, ಮೋಹಕ ಪರಿಸರದ ನಡುವೆ ಬಳುಕುವ ಬಾಲೆ – ಕವಿತೆಯ ಸಾಲುಗಳು ಹೊಳೆಯಲು ಇನ್ನೇನು ಬೇಕು.
ನಿಮ್ಮ ಕಲ್ಪನೆಯ ಕವಿತೆ ಫೆಬ್ರುವರಿ 15ರ ಒಳಗೆ ನಮಗೆ ತಲುಪಬೇಕು.

---

ವಿಳಾಸ: ಕಲ್ಪನೆ ವಿಭಾಗ, ‘ಮಯೂರ’
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in